## ನಿಮ್ಮೊಡನೆ

# ಲಿಂಗತ್ವ ಪ್ರಜ್ಞೆ ಗೌರವಯುತವಾಗಿರಲಿ

**ಇದೀಗ ಸಲಿಂಗ ಕಾಮ– ಪ್ರೇಮದ ಬಗ್ಗೆ ಚರ್ಚೆ ಆರಂಭವಾಗಿದೆ. ಸಮಾಜದಲ್ಲಿ ಈ ವಿಷಯವನ್ನು ಮುಕ್ತವಾಗಿ ಚರ್ಚಿಸುತ್ತಿರುವುದು ಸ್ವಾಗತಾರ್ಹ. ಆದರೆ ಈಗಲೂ ಅದನ್ನು ಅಪರಾಧದ ಕಂಗಳಿಂದ, ತಪ್ಪೆನ್ನುವ ಪೂರ್ವಗ್ರಹದಿಂದಲೇ ಮಾತನಾಡಲಾಗುತ್ತಿದೆ. ಲಿಂಗತ್ವದ ಆಯ್ಕೆ ವೈಯಕ್ತಿಕವಾದುದು. ಆದರೆ ಪ್ರಜ್ಞೆ ಸಾರ್ವತ್ರಿಕವಾದುದು.**



ವಿಜಯ

ಸಲಿಂಗ ಕಾಮಿಗಳೆನ್ನಬೇಕೆ, ಪ್ರೇಮಿಗಳೆನ್ನಬೇಕೆ? ಮನೆಯಿಂದ ದೂರ ಇರುವ ಪುರುಷರಲ್ಲಿ, ಜೈಲುಗಳಲ್ಲಿ, ಮೇಳಗಳಲ್ಲಿ, ಯುದ್ಧಭೂಮಿಯಲ್ಲಿ, ಸೇನೆಯಲ್ಲಿ ಸಲಿಂಗ ಕಾಮ ಸಾಮಾನ್ಯವಾಗಿದೆ. ಅದು ಅಲ್ಲಿಯ ಅನಿವಾರ್ಯವೂ ಆಗಿದೆ ಎಂಬ ವಾದಗಳು ಮತ್ತು ವಾಸ್ತವಗಳು ಹಲವಾರು ನೆಲೆಗಳಲ್ಲಿ ಚರ್ಚೆಗೆ ಈಡಾಗಿವೆ.

ಮೊದಲನೆಯ ಅಂಶ ಸಲಿಂಗ ಕಾಮ ಅಥವಾ ಪ್ರೇಮ ಎಂಬುದು ಅಪರಾಧವೇ? ಅನಿವಾರ್ಯವೇ? ಅದು ಅವರವರ ಆಯ್ಕೆಯೇ? ಈ ಬಗ್ಗೆ ತಿಳಿಹೇಳಬೇಕಾದವರು ಯಾರು?

ಎರಡನೆಯದ್ದು ಇದನ್ನು ತಪ್ಪು, ಅನೈಸರ್ಗಿಕವಾದುದು ಎಂಬ ದೃಷ್ಟಿಯಿಂದಲೇ ಯಾಕೆ ನೋಡಬೇಕು? ಸಲಿಂಗ ಆಕರ್ಷಣೆಯಲ್ಲಿ ಅಸಹಜವಾದುದು ಏನಿದೆ? ಅದು ದೈಹಿಕ ವಾಂಛೆಯೇ, ಮಾನಸಿಕ ಬಯಕೆಯೇ?

ಇಂಥ ಹಲವಾರು ಪ್ರಶ್ನೆಗಳನ್ನಿರಿಸಿಕೊಂಡೇ ವಾದಗಳು ಹುಟ್ಟುತ್ತಿವೆ. ಎಲ್‌ಜಿಬಿಟಿಕ್ಯೂ++ ಸಮೂಹವನ್ನು ಪ್ರತ್ಯೇಕಿಸಿಯೇ ಏಕೆ ನೋಡಬೇಕು? ಕಾಲೇಜು ಓದುವ ಮಕ್ಕಳು, ಇಂದಿನ ಪೀಳಿಗೆಯವರು ಇದನ್ನು ಸಹಜವಾಗಿಯೇ ಸ್ವೀಕರಿಸಿದ್ದಾರೆ. ಲಿಂಗತ್ವದ ಆಯ್ಕೆಯನ್ನು ಗೌರವಿಸಬೇಕು ಎಂದೇ ಹೇಳುತ್ತಾರೆ. ಈ ಬಗ್ಗೆ ಅಪ್ಪ ಅಮ್ಮನೊಂದಿಗೆ ಚರ್ಚಿಸುವುದರಲ್ಲಿ ತಪ್ಪೇನೂ ಇಲ್ಲ ಎಂದೂ ವಾದಿಸುತ್ತಾರೆ. ಮಕ್ಕಳಲ್ಲಿ ಇರುವ ಪ್ರಜ್ಞೆ ಮತ್ತು ಅರಿವು, ಇನ್ನೊಂದು ಹಿರಿಯ ಪೀಳಿಗೆಯಲ್ಲಿಲ್ಲ.

ಈ ಪೀಳಿಗೆಯ ಮಕ್ಕಳಿಗೆ ಅಗಾಧವಾದ ಅರಿಯುವ ಅವಕಾಶಗಳಿವೆ. ಒಟಿಟಿಗಳಲ್ಲಿಯೂ ಸಾಕಷ್ಟು ಈ ಕುರಿತ ಧಾರಾವಾಹಿಗಳು ಪ್ರಸಾರವಾಗುತ್ತಿವೆ. ಪ್ರತಿ ಧಾರಾವಾಹಿಯಲ್ಲಿಯೂ ಒಂದಾದರೂ ಪಾತ್ರ ಎಲ್‌ಜಿಬಿಟಿಕ್ಯೂ++ ಪರಿಸ್ಥಿತಿಯನ್ನು ಬಿಂಬಿಸುತ್ತದೆ. ಅಲ್ಲಿಯೂ ಅವಮಾನ ಮತ್ತು ಅನುಮಾನಗಳೇ ಸಮಾಜದಿಂದ ದೊರೆಯುವ ಕೊಡುಗೆಯಾಗಿದೆ. ಅವುಗಳನ್ನು ನಿಭಾಯಿಸುವುದು ಹೇಗೆ, ಆ ತುಮುಲ ದಾಟುವುದು ಹೇಗೆ ಎಂಬುದು ಅಲ್ಲಿಯ ಥಾಟಗಳಾಗಿವೆ. ಕೆಲವೊಮ್ಮೆ ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವುದು, ಅವರಲ್ಲಿಯೂ ಅಪರಾಧಿ ಪ್ರಜ್ಞೆಯೇ ಬೆಳೆಯುವಂತೆ ಮಾಡುವುದು ಸಮಾಜಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಸಾಮಾಜಿಕ ಸ್ವಾಸ್ಥ್ಯದ ಹಿನ್ನೆಲೆಯಲ್ಲಿ ನೋಡುವುದಾದರೆ ಮನುಷ್ಯ ಮನುಷ್ಯನನ್ನು ಮನುಷ್ಯನಾಗಿಯೇ ನೋಡಬೇಕು. ಸಾಮಾಜಿಕ ನಿರ್ಬಂಧನೆಗಳಿಂದಾಗಿಯೇ ಕೆಲವು ಲಿಂಗತ್ವ ಅಲ್ಪಸಂಖ್ಯಾತರು ಸಮಾಜದಲ್ಲಿ ಭಿಕ್ಷೆ ಬೇಡಲು ನಿಂತಿದ್ದಾರೆ. ಅವರನ್ನೆಲ್ಲ ಅವರಿದ್ದಂತೆಯೇ ಅವರ ಕುಟುಂಬದವರೂ ಒಪ್ಪಿಕೊಂಡಿದ್ದರೆ ಅಂಥದ್ದೊಂದು ಸಮುದಾಯವನ್ನು ನಾವು ನೋಡುತ್ತಿರಲಿಲ್ಲ. ಪುರುಷಪ್ರಧಾನ ಅಥವಾ ಪಾಳೆಗಾರಿಕೆ ಮನಸ್ಥಿತಿ ಇರುವ ಮಹಿಳೆಯರೂ ಈ ಜೀವಗಳನ್ನು ಒಪ್ಪುವುದೇ ಇಲ್ಲ. ಹೀಗಳೆಯುವುದು, ಜರೆಯುವುದು, ಇಡೀ ಮನೆತನದ ಗೌರವ ಒಬ್ಬ ವ್ಯಕ್ತಿಯ ಲಿಂಗತ್ವದಲ್ಲಿಯೇ ಅಡಗಿದೆ ಎಂಬಂತೆ ಮಾತಾಡುವುದು, ದೂರುವುದು ದೂಷಿಸುವುದು ಸಮಾಜದಲ್ಲಿ ಇರುವವರೆಗೂ ಇಂಥ ಚರ್ಚೆಗಳು ಆಗುತ್ತಲೇ ಇರುತ್ತವೆ.

ಲಿಂಗತ್ವದ ಸ್ವಾತಂತ್ರ್ಯವನ್ನು ಸ್ವೇಚ್ಛೆಯೆಂಬಂತೆ ಬಿಂಬಿಸಿ, ಸಮಾಜದ ಕಳಂಕ ಎಂಬಂತೆ ತೋರುತ್ತಿರುವ, ಮಾತಾಡುತ್ತಿರುವ ಎಲ್ಲರಿಗೂ ಅನ್ವಯವಾಗುವ ಮಾತೊಂದಿದೆ. ಲಿಂಗತ್ವದ ಕುರಿತು ಪ್ರಜ್ಞೆ ಬೆಳೆಸಿಕೊಳ್ಳಬೇಕು. ಸಹಾನುಭೂತಿಯಿಂದ ಅಥವಾ ಸಾಮಾನ್ಯರಂತೆಯೇ ಕಾಣಬೇಕು. ಆದರೆ ಪರಸ್ಪರ ಗೌರವದಿಂದ ಕಾಣುತ್ತಿರುವ ಯುವಜನಾಂಗದ ಮನಸಿನೊಳಗೂ ಈ ಬಗ್ಗೆ ವಿಷ ತುಂಬುವ ಕೆಲಸವೂ ಸದ್ದಿಲ್ಲದೆಯೇ ನಡೆದಿದೆ. ಅವರಿಗಾಗಿರುವ ಬೈಗುಳ, ಕೈಸನ್ನೆಗಳನ್ನು ಮಾಡಿ ಛೇಡಿಸುವುದು, ಇದು ಸಾಮಾನ್ಯ ಎಂಬಂತೆ ಬಿಂಬಿಸುವುದು, ಅಪರಾಧವನ್ನು ಸಾಹಸವೆಂಬಂತೆ ಬಿಂಬಿಸುವಷ್ಟೇ ಅಪಾಯಕಾರಿಯಾಗಿದೆ.

ಲಿಂಗತ್ವದ ಬಗ್ಗೆ ಪೂರ್ತಿ ಅರಿವು ಇಲ್ಲದೇ ಇರುವುದು ಇಂಥ ವಾದಗಳನ್ನೂ ಚರ್ಚೆಗಳನ್ನೂ ಹುಟ್ಟುಹಾಕುತ್ತವೆ. ಪರಸ್ಪರ ಗೌರವವನ್ನೇ ನೀಡದ ಜನರಿಂದ ಏನನ್ನು ನಿರೀಕ್ಷಿಸಲು ಸಾಧ್ಯ? ಲಿಂಗತ್ವದ ಆಯ್ಕೆ ಅನಿವಾರ್ಯಗಳಿಗಿಂತ ಹೆಚ್ಚಾಗಿ, ನಾವೆಷ್ಟು ಈ ಬಗ್ಗೆ ಅರಿತಿದ್ದೇವೆ? ಇದನ್ನು ಸಹಜವಾಗಿ ಸ್ವೀಕರಿಸುವಲ್ಲಿ ಎಲ್ಲಿ ಎಡವುತ್ತಿದ್ದೇವೆ ಎಂಬ ಕಡೆ ಹೆಚ್ಚು ಗಮನಹರಿಸಿದರೆ ಒಳಿತಾಗುವುದು. ಇಲ್ಲದಿದ್ದಲ್ಲಿ ಈ ಚರ್ಚೆ ನಡೆದಷ್ಟೂ ಸಮಾಜಕ್ಕೆ ಒಂದು ಸ್ಪಷ್ಟ ಚಿತ್ರಣ ದೊರೆಯುವಂತಾಗಬೇಕು. ಅದದೇ ಗೊಂದಲ, ಸಾಮಾಜಿಕ ಮತ್ತು ಸಾಂಸ್ಕೃತಿಕ, ಪಾರಂಪರಿಕ ಕಾರಣಗಳನ್ನು ನೀಡುತ್ತ, ಕೆಲವರ ಆಯ್ಕೆಯನ್ನೇ ತಿರಸ್ಕರಿಸುವುದಾದರೆ, ಬಹಿಷ್ಕರಿಸುವುದಾದರೆ ನಾವು ನಾಗರಿಕರು ಎಂದು ಹೇಳುವ ಸ್ಥೈರ್ಯ ಕಳೆದುಕೊಳ್ಳಬೇಕಾದೀತು. ಬದಲಾವಣೆ ಎಂಬುದು ಸುಧಾರಣೆಯೇ ಆಗಿರಬೇಕು. ಆ ಸುಧಾರಣೆಯಲ್ಲಿ ಪರಸ್ಪರ ಗೌರವ ಕಾಣಬೇಕು.

ಒಂದು ಚರ್ಚೆಗೆ ಬರುವ ಪ್ರತಿಕ್ರಿಯೆಗಳಲ್ಲಿ ಅರೆಬರೆ ಜ್ಞಾನ ಭರಪೂರ ತಿರಸ್ಕಾರ, ಹೀಗಳೆಯುವಿಕೆ ಇದ್ದಲ್ಲಿ ಅದು ಅಹಂಕಾರವನ್ನಷ್ಟೇ ಪೋಷಿಸಿದಂತಾಗುತ್ತದೆ. ಲಿಂಗತ್ವದ ಬಗೆಗಿನ ಅರಿವು ಮಾತ್ರ ಹೀಗಾಗದಂತೆ ತಡೆಯಬಹುದು.

■ ರಶ್ಮಿ ಎಸ್